ಶ್ರೀ ಎ. ಕೃಷ್ಣಪ್ಪ : ಹಣ ಹಾಕಿಕೊಂಡು ಮಾಡಬೇಡಿಯೆಂದು ನಾವು ಹೇಳಿಲ್ಲ. ಮಾಡಿ ಮಾಡುವುದಕ್ಕೆ ಅಡ್ಡಿಯಿಲ್ಲ.

ಅಧ್ಯಕ್ಷರು : ಮಾಡುವುದಕ್ಕೆ ಅಡ್ಡಿಯಿಲ್ಲವೆಂದು ಮಂತ್ರಿಗಳು ಹೇಳುತ್ತಾರಲ್ಲ ಮಾಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಈಗ ತಾನೇ ಇನ್‌ಸೆಂಟೀವ್ ಎಂದು ತಾವು ಹೇಳುತ್ತೀರಿ, ಈ ದ್ವಂದಮಯ ಹೇಳಿಕೆಯಿಂದ ಗೊಂದಲವಾಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅದು ಅರಸುರವರ ಹೆಸರಿನಲ್ಲಿ 10 ಲಕ್ಷ ರೂಪಾಯಿನಲ್ಲಿ ಒಂದು ಸಮುದಾಯ ಭವನ ಆಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ, ಅವರು ಕೇಳುವುದು ಎಂಪಿ, ಎಂಎಲ್‌ಎ, ಫಂಡ್ಸ್‌ಗಳಿಂದ ಹಾಕಿಕೊಂಡು ಮಾಡಬಹುದಾ ಎಂದು ಕೇಳುತ್ತಿದ್ದಾರೆ.

ಶ್ರೀ ಎ. ಕೃಷ್ಣಪ್ಪ : ಮಾಡಬಹುದು ಅದಕ್ಕೆ ನಮ್ಮ ತಕರಾರು ಏನಿಲ್ಲ. ಆದರೆ ಇದನ್ನು ಉಪಯೋಗಿಸಿಕೊಂಡು ಮಾತ್ರ ಮಾಡಿ ಎಂದು ಸೂಚನೆ ಕೊಟ್ಟಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಈಗ ತಾನೇ ಇಲ್ಲವೆಂದು ಉತ್ತರ ಕೊಟ್ಟರು. ಈಗ ಹೇಳುತ್ತಾರೆ ತಕರಾರು ಇಲ್ಲವೆಂದು ಹೀಗಾದರೆ ಹೇಗೆ?

ಅಧ್ಯಕ್ಷರು : ಅವರಿಗೆ ಸರಿಯಾದ ಉತ್ತರ ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : 10–12 ಮಾಡುವ ಬದಲು ಅವರೇ 5 ಮಾಡಲಿ.

ಶ್ರೀ ಎ. ಕೃಷ್ಣಪ್ಪ : ಮಾಡಬಾರದು ಎಂದೂ ನಾವು ಹೇಳಿಲ್ಲ. ಅದನ್ನು ನಾನು ನಿಮಗೆ ತಿಳುವಳಿಕೆ ಹೇಳಿದ್ದು.

ಶ್ರೀ ಶಿವಾನಂದ ಎಸ್. ಪಾಟೀಲ್ : ಹಾಗಾದರೆ ಯಾವುದಾದರೊಂದು ನಿರ್ದಿಷ್ಟವಾಗಿ ಹೇಳಿ.

ಶ್ರೀ ಎ. ಕೃಷ್ಣಪ್ಪ : ಮಿಕ್ಸ್ ಮಾಡಿ ಮಾಡಬಹುದು.

ಪಿರಿಯಾಪಟ್ಟಣ ತಾಲ್ಲೂಕಿನ ಆಶ್ರಮ ಶಾಲೆ ಕಟ್ಟಡ

550 (4784) : ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕು ಅಬ್ಬಳತಿ ಆಶ್ರಮಶಾಲೆ ಕಟ್ಟಡಕ್ಕೆ ಮಂಜೂರಾದ ಹಣ ಎಷ್ಟು ಮತ್ತು ಯಾವಾಗ ಪ್ರಾರಂಭಿಸಲಾಯಿತು.

ಆ) ಇದುವರೆವಿಗೂ ಎಷ್ಟು ಕೆಲಸ ಆಗಿದೆ: ಕಟ್ಟಡದ ಕೆಲಸ ಸ್ಥಗಿತವಾಗಿರುವ ಕಾರಣವೇನು? ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಕಟ್ಟಡದ ಕೆಲಸ ಮುಗಿಯಲಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಕಟ್ಟಡದ ಒಟ್ಟು ಅಂದಾಜು ವೆಚ್ಚವು ರೂ. 45.32 ಲಕ್ಷಗಳು ಇದರಲ್ಲಿ ರೂ. 15.00 ಲಕ್ಷಗಳು ದಿನಾಂಕ: 29.03.2002ರಲ್ಲಿ ಸರ್ಕಾರವು ಬಿಡುಗಡೆ ಮಾಡಿರುತ್ತದೆ. ನಿರ್ಮಾಣದ ಕೆಲಸವು ಆಗಸ್ಟ್ 2002ರಲ್ಲಿ ಪ್ರಾರಂಭಿಸಲಾಗಿದೆ.

ಆ) ಶಾಲಾ ಕಟ್ಟಡದ ತಳಪಾಯದ ಕೆಲಸ ಮುಗಿದಿದೆ. ವಸತಿ ನಿಲಯದ ಕಟ್ಟಡದ ಕಾಮಗಾರಿ ಮೇಲ್ಛಾವಣಿಯವರೆಗೆ ಆಗಿರುತ್ತದೆ. ಭೂಸೇನಾ ನಿಗಮವು ಜೂನ್ 2003ರ ಅಂತ್ಯಕ್ಕೆ ರೂ. 17.00

ಲಕ್ಷಗಳನ್ನು ವೆಚ್ಚ ಮಾಡಿರುತ್ತದೆ. ರೂ. 30.00 ಲಕ್ಷಗಳ ಬಿಡುಗಡೆಗೆ ಸರ್ಕಾರವು ಪ್ರಸ್ತಾವನೆಯನ್ನು ದಿನಾಂಕ: 6.6.2003ರಂದು ಸ್ವೀಕರಿಸಿದೆ. ಹಣ ಬಿಡುಗಡೆಯಾದ ಕೂಡಲೇ ಕೆಲಸವು ಪ್ರಾರಂಭವಾಗುತ್ತದೆ.

ಶ್ರೀ ಹೆಚ್.ಸಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ದಿನಾಂಕ 29.3.2002ರಲ್ಲಿ ಸರ್ಕಾರ 15 ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿ 45 ಲಕ್ಷ ರೂಪಾಯಿ ಕಟ್ಟಡವನ್ನು ಕಟ್ಟಿಸಲಿಕ್ಕೆ ಪ್ರಾರಂಭಿಸಿದೆ. ಈ ಕಟ್ಟಡವನ್ನು ಲ್ಯಾಂಡ್ ಆರ್ಮಿಯವರಿಗೆ ಗುತ್ತಿಗೆ ನೀಡಲಾಗಿದೆ. ಒಂದು ವರ್ಷ ಮೂರು ತಿಂಗಳಾದರೂ ಈ ಕೆಲಸ ಮುಗಿದಿಲ್ಲ. 15 ಲಕ್ಷ ರೂ ಹಣ ಬಿಡುಗಡೆಯಾಗಿ 15 ಲಕ್ಷ ರೂ ಕೆಲಸ ಮಾಡಿ ಆರು ತಿಂಗಳಾಗಿವೆ. ಆರು ತಿಂಗಳಿನಿಂದ ಕೆಲಸ ಸ್ಥಗಿತವಾಗಿದೆ. ಈ ಪ್ರಶ್ನೆಗೆ ಉತ್ತರಿಸುತ್ತಾ ದಿನಾಂಕ : 6.6.2003ರಲ್ಲಿ ಹಣಕ್ಕೋಸ್ಕರ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ ಎಂದು ತಿಳಿಸಿದ್ದಾರೆ. ಹಾಗಾದರೆ ಜಿಲ್ಲಾಡಳಿತ ಇದರ ಬಗ್ಗೆ ಕಾಳಜಿ ವಹಿಸಿಲ್ಲವೆ? ಕೆಲಸ ಆರು ತಿಂಗಳಿನಿಂದ ನಿಲ್ಲುವುದಕ್ಕೆ ಕಾರಣ ಏನು? ಇದನ್ನು ಲ್ಯಾಂಡ್ ಆರ್ಮಿಗೆ ಕೊಡಲಿಕ್ಕೆ ಕಾರಣ ಏನು? ಇದನ್ನು ಟೆಂಡರ್ ಕರೆದಿದ್ದರೆ ಯಾವುದೇ ಗುತ್ತಿಗೆದಾರರು 45 ಲಕ್ಷ ರೂ. ಅಂದಾಜಿನ ಕೆಲಸವನ್ನು ಒಂದು ವರ್ಷದೊಳಗೆ ಮುಗಿಸತಕ್ಕಂಥ ಕೆಲಸ ಆಗುತ್ತಿತ್ತು. ಈ ಲ್ಯಾಂಡ್ ಆರ್ಮಿಯವರಿಗೆ ಕೊಟ್ಟಿದ್ದರಿಂದ, ಅವರು ಹಣ ಕೊಟ್ಟಷ್ಟು ಕೆಲಸ ಮಾಡಿದಷ್ಟು, ಕೆಲಸ ಮುಗಿದಿಲ್ಲ. ಪೌಂಡೇಷನ್ ಹಾಕಿ ಕಟ್ಟಡ ಕಟ್ಟಿ 6 ತಿಂಗಳಿನಿಂದ ಬಿಸಿಲಿನಲ್ಲಿ ಒಣಗಿ ಮಳೆಯಲ್ಲಿ ನೆನೆದು ಕಟ್ಟಡ ಕಳಪೆಯಾಗುತ್ತಿದೆ ಇದಕ್ಕೆ ಯಾರು ಕಾರಣ? ದಯಮಾಡಿ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಅದು ಒಂದು ಸರ್ಕಾರಿ ಸಂಸ್ಥೆ ಎಂದು ಹೇಳಿ ಕೆಲವು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕೊಟ್ಟಿದ್ದೇವೆ. ಈಗ ಆದಂಥ ಕೆಟ್ಟ ಅನುಭವದ ಆಧಾರದ ಮೇಲೆ ಅದರ ಮೇಲೆ ಕರೆಕ್ಟೀವ್ ಆಕ್ಷನ್‌ಅನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಹಾಗಾಗಿ ತಡವಾಗಿರುವುದನ್ನು ಬೇಗ ಮಾಡಬೇಕು ಎಂದು ಕ್ರಮ ಜರುಗಿಸುತ್ತೇವೆ. ಆದಷ್ಟು ಬೇಗ ಅದನ್ನು ಮುಕ್ತಾಯಗೊಳಿಸಲಿಕ್ಕೆ ಸಂಬಂಧಪಟ್ಟವರಿಗೆ ಸೂಚನೆ ಕೊಡಲಾಗುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ನನ್ನಲ್ಲೂ ಕೂಡ ಒಂದು ಆಶ್ರಮ ಶಾಲೆಯಿದೆ.

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೇ ಪಿರಿಯಾಪಟ್ಟಣದ್ದು ಮಾತ್ರ ಕೇಳಿ. Mr. Krishnappaji don't answer that question. ಬೇರೆಯದು ಕೇಳಕೂಡದು.

ಶ್ರೀ ಹೆಚ್.ಸಿ. ಬಸವರಾಜ್ : ಗಿರಿಜನ ವಿದ್ಯಾರ್ಥಿಗಳು ಇದರಿಂದ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಕಟ್ಟಡವನ್ನು ಎಷ್ಟು ದಿವಸದೊಳಗೆ ಮುಗಿಸಲಿಕ್ಕೆ ಆಗುತ್ತದೆ? ಹಣ ಯಾವಾಗ ಬಿಡುಗಡೆ ಮಾಡಿಕೊಡುತ್ತಾರೆ ಮತ್ತು ಯಾವಾಗ ಮುಗಿಸುತ್ತಾರೆಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎ. ಕೃಷ್ಣಪ್ಪ : ಆರು ತಿಂಗಳೊಳಗೆ ಅದನ್ನು ಮುಗಿಸಿ ಮಕ್ಕಳ ಉಪಯೋಗಕ್ಕೆ ಹ್ಯಾಂಡ್ ಓವರ್ ಮಾಡುತ್ತೇವೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಯೋಗೀಶ್ ಭಟ್, ಸದಸ್ಯರು ಗೈರು ಹಾಜರಿದ್ದಾರೆ ಈಗ ತಡೆಹಿಡಿಯಲಾದ ಪ್ರಶ್ನೆಗಳು ಮಾನ್ಯ ಎಸ್.ಎಸ್. ಪಾಟೀಲ್‌ರೇ ತಾವು ಹೇಳಿ.